ಕಿರುಚಿತ್ರ

# ಗಣಿಯೊಳಗಿನ ಭೂತ



ಸಿನಿಮಾ ಮೇಕಿಂಗ್‌ನ ಪ್ರಾಕ್ಟೀಸ್‌ಗಾಗಿ ಮಾಡಿರುವ ಕಿರುಚಿತ್ರದಂತಿರುವ ‘ವಿಚರ್’, ಕಥೆಯ ದೃಷ್ಟಿಯಲ್ಲಿ ಸೊರಗಿದೆ.

■ ಗೌರಿ

ಕನ್ನಡದಲ್ಲಿ ಸ್ಟಾರ್ ನಟರ ಮೆರವಣಿಗೆಯಿದ್ದ ಹಾಗೆ, ಇಂಗ್ಲಿಷ್ ಮುಖ್ಯವಾಹಿನಿ ಸಿನಿಮಾಗಳ ಗೆಲುವಿನ ಸೂತ್ರ ಇರುವುದು ಮೇಕಿಂಗ್‌ನಲ್ಲಿ. ದೊಡ್ಡ ಬಜೆಟ್‌ನಲ್ಲಿ, ಕಣ್ಣು ಕೋರೈಸುವ ಮೇಕಿಂಗ್‌ನ ಮುಖವಾಡ ಹೊತ್ತು ನಿರ್ಮಾಣಗೊಳ್ಳುವ ಹಾಲಿವುಡ್‌ನ ಬಹುತೇಕ ಸಿನಿಮಾಗಳು ಕಥನದ ವಿಷಯದಲ್ಲಿ ಟೊಳಲೊಟ್ಟೆಯೇ ಆಗಿರುತ್ತವೆ. ಮೇಕಿಂಗ್ ಗುರಾಣಿ ಹಿಡಿದುಕೊಂಡು ಚಿತ್ರ ನಿರ್ಮಾಣ ಮಾಡುವ ಚಾಳಿ ಬರೀ ಮುಖ್ಯವಾಹಿನಿಯ ಸಿನಿಮಾಗಳಿಗಷ್ಟೇ ಅಲ್ಲ, ಆ ಲೋಕಕ್ಕೆ ಅಡಿಯಿಡಲು ಬಯಸುತ್ತಿರುವವರು ಮಾಡುವ ಕಿರುಚಿತ್ರಗಳಿಗೂ ಇದೆ.

‘ವಿಚರ್’ ಅಂಥದ್ದೇ ಒಂದು ಕಿರುಚಿತ್ರ. ಹಾಲಿವುಡ್‌ನ ಮುಖ್ಯವಾಹಿನಿಯ ಸಿನಿಮಾಗಳ ಸಣ್ಣ ನೆರಳ ಹಾಗೆಯೇ ಈ ಕಿರುಚಿತ್ರವಿದೆ. ಹಾಗೆ ನೋಡಿದರೆ ಇಲ್ಲಿನ ಕಥೆಯ ಕ್ಯಾನ್ವಾಸು ಒಂದು ಪೂರ್ಣಪ್ರಮಾಣದ ಸಿನಿಮಾ ಮಾಡುವಷ್ಟು ದೊಡ್ಡದಿದೆ. ಅದನ್ನು ಕಿರುಚಿತ್ರದ ಚೌಕಟ್ಟಿಗೆ ಕುಗ್ಗಿಸಲಾಗಿದೆ. ಈ ಕುಗ್ಗಿಸುವಿಕೆಯಲ್ಲಿ ಸಹಜವಾಗಿಯೇ ಅದರ ತೀವ್ರತೆಯೂ ಕುಗ್ಗಿದೆ. ಹಾಗಾಗಿಯೇ ಇದು ಕಥೆಯಾಗಿ ಕಾಡುವುದಿಲ್ಲ. ಆದರೆ ಅಲ್ಲಿನ ಸಿನಿಮಾಗಳ ಬೀಜ ಹೇಗೆ ಮೊಳೆಯುತ್ತದೆ ಎಂಬುದನ್ನು ಅಭ್ಯಸಿಸಲು ಈ ಕಿರುಚಿತ್ರವನ್ನು ನೋಡಬಹುದು.

ಹಿಂಸೆಯ ಹಲವು ಛಾಯೆಗಳು ಈ ಕಿರುಚಿತ್ರದಲ್ಲಿ ಇಡಿಕಿರಿದಿವೆ. ಹಾಗೆಂದು ಆ ಹಿಂಸೆ ಅತಿರೇಕದಲ್ಲೇನೂ ಇಲ್ಲ.

ಕಥಾನಾಯಕನಿಗೆ ಒಂದಿಷ್ಟು ಜನರು ಒಂದು ಸಹಾಯ ಮಾಡಬೇಕು ಬಾ ಎಂದು ಒಂದು ಗಣಿಗಾರಿಕೆ ಜಾಗಕ್ಕೆ ಕರೆದೊಯ್ಯುತ್ತಾರೆ. ಆ ಗಣಿಯಲ್ಲಿ ಒಂದು ದೆವ್ವ ಆ ಕೆಲಸಗಾರರನ್ನು ಕೊಲ್ಲುತ್ತಿರುತ್ತದೆ. ಆ ದೆವ್ವವನ್ನು ನಾಶಗೊಳಿಸುವ ಕೆಲಸ ನಾಯಕನಿಗೆ ಬರುತ್ತದೆ. ಹಾಗೆಯೇ ಆ ದೆವ್ವವನ್ನು ನಾಶಗೊಳಿಸುತ್ತಾನೆ ಕೂಡ. ಆದರೆ ಸಾಯಿಸುವ ಮೊದಲು ಆ ದೆವ್ವ ಅವನ ಮುಖವನ್ನು ಮುಟ್ಟುತ್ತದೆ. ಆ ಮೂಲಕ ತನ್ನ ಬದುಕಿನ ಕಥೆಯನ್ನು ಆ ನಾಯಕನಿಗೆ ದಾಟಿಸುತ್ತದೆ. ಅದರ ನಂತರ ಏನಾಗುತ್ತದೆ ಎಂಬುದೇ ಕಿರುಚಿತ್ರದ ವಸ್ತು.

ಈ ಫ್ಲ್ಯಾಷ್‌ಬ್ಯಾಕ್‌ನಲ್ಲಿ ಊಹಿಸಲಾಧ್ಯವಾದ ಕಥೆಯೇನೂ ಇಲ್ಲ. ಆ ಗಣಿ ಅವಳ ತಂದೆಯ ಆಸ್ತಿಯಾಗಿರುತ್ತದೆ. ಅದರ ಮೇಲಿನ ಆಸೆಯಿಂದ ಇವಳ ಗಂಡ ತಂದೆ ಮತ್ತು ಮಗಳು ಇಬ್ಬರನ್ನೂ ಕೊಂದಿರುತ್ತಾನೆ. ಇದು ಸಾಮಾನ್ಯವಾದ ಕಥೆಯೇ. ಹಾಗಾಗಿಯೇ ಕಥೆಯ ಕಾರಣಕ್ಕೆ ಇದು ನಮ್ಮ ಗಮನ ಸೆಳೆಯುವುದಿಲ್ಲ. ಅಲ್ಲದೇ ಸೀಮಿತ ಸಮಯದಲ್ಲಿ ಮುಗಿಸುವ ಧಾವಂತದಲ್ಲಿ ಯಾವ ಭಾವವೂ ತೀವ್ರವಾಗಿ ವ್ಯಕ್ತಗೊಂಡಿಲ್ಲ. ಅದು ನಮ್ಮ ಮನಸ್ಸನ್ನು ತಾಕುವುದೂ ಇಲ್ಲ.

ಸಿನಿಮಾ ನಿರ್ದೇಶನದ ಇಂಟರ್ನ್‌ಷಿಪ್ ಅನ್ನುವ ರೀತಿಯಲ್ಲಿ ಈ ಕಿರುಚಿತ್ರವನ್ನು ಮಾಡಿರುವುದೂ, ಅದೇ ಸಮಯದಲ್ಲಿ ಕಥೆಯ ಎಳೆಯೂ ಸಿನಿಮಾನಿರ್ಮಾಣದ ಬಹುಮುಖ್ಯ ಅಂಶ ಎಂಬುದನ್ನು ಅಷ್ಟಾಗಿ ಅರಿತುಕೊಳ್ಳದೇ ಇರುವುದೂ ಈ ಕಿರುಚಿತ್ರದಲ್ಲಿ ಎದ್ದು ಕಾಣುತ್ತದೆ. ಆದರೆ ಮೇಕಿಂಗ್‌ನಲ್ಲಿ ಹಲವು ಅಂಶಗಳು ಗಮನಸೆಳೆಯುವಂತಿವೆ. ಕತ್ತಲನ್ನು ಇಲ್ಲಿ ಬರೀ ದೃಶ್ಯದ ಅಗತ್ಯಕ್ಕಷ್ಟೇ ಅಲ್ಲ, ಬಜೆಟ್‌ನ ಅಗತ್ಯಕ್ಕೂ ಹೊಂದುವ ಹಾಗೆ ಬಳಸಿಕೊಂಡಿರುವುದನ್ನು ಗಮನಿಸಬೇಕು. ಅರ್ಥಮರ್ಥ ಕಾಣಿಸುವುದರಲ್ಲಿಯೇ ಕಾಣದೇ ಇರುವುದನ್ನೂ ಧ್ವನಿಸುವ ಹಾಗೆ ದೃಶ್ಯವನ್ನು ಸಂಯೋಜಿಸಲಾಗಿದೆ. ಆ ಮೂಲಕ ಕಾಣಿಸಲು ಬೇಕಾಗುವ ಬಜೆಟ್ ಅನ್ನೂ ಉಳಿಸಿದ್ದಾರೆ. ಸಂಕಲನ, ಧ್ವನಿ ವಿನ್ಯಾಸ, ಪಾತ್ರಚಿತ್ರಣ ಎಲ್ಲದರಲ್ಲಿಯೂ ಜನಪ್ರಿಯ ಹಾಲಿವುಡ್ ಸಿನಿಮಾ ಅನುಕರಿಸಿರುವುದು ಈ ಕಿರುಚಿತ್ರದ ಮಿತಿಯೇ ಹೌದು.



**ಹೆಸರು:** ವಿಚರ್ (ಫಿನ್‌ಲೆಂಡ್)
**ನಿರ್ದೇಶನ:** ಮಿಕ್ಕೊ ಲೊಪ್ಪೋನೆನ್
**ಛಾಯಾಗ್ರಹಣ:** ಎಸ್ಸಾ ಜೂಲಿಸಾ
**ಸಂಗೀತ:** ಜೂಸಿ ಹೂತಾಲಾ
**ತಾರಾಗಣ:** ಜೆಸ್ಸಿ ಲಿಸ್ಕೋಲಾಮ, ಜೆಸ್ಸಿಕಾ ವೂಲ್ಫ್, ಕ್ರಿಸ್ಟಿಯನ್ ಜುಲ್

ಈ ಕಿರುಚಿತ್ರ ವೀಕ್ಷಣೆಗೆ bit.ly/35KwJSZ ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.